## 7. ಮುನ್ನಡೆಗೆ ಸ್ವಾವಲಂಬನೆ ಅನಿವಾರ್ಯ

ಬಹುಶಃ 'ಕೊರೊನಾ' ಬಿಟ್ಟರೆ ಜನರು ಗೂಗಲ್‌ನಲ್ಲಿ ಅತ್ಯಂತ ಹೆಚ್ಚು ಹುಡುಕಾಟ ನಡೆಸಿದ ಪದಪುಂಜ 'ಆತ್ಮನಿರ್ಭರ' ಇರಬಹುದೇನೋ? ನಾವೀಗ ಭಾರತವನ್ನು ಹೆಚ್ಚು 'ಸ್ವಾವಲಂಬಿ'ಯಾಗಿಸಬೇಕು. ಆ ಮೂಲಕ ಮುಂದಿನ ಒಂದೆರಡು ದಶಕಗಳಲ್ಲಿ ನಾವು ಜಗತ್ತನ್ನು ಆಳುವಷ್ಟು ಸಬಲರಾಗಬೇಕು. ಇದು ನಮ್ಮ ಪ್ರಧಾನ ಮಂತ್ರಿಗಳ ಆಶಯ. ಯಾವುದೇ ಒಂದು ದೇಶವು ಮುಂಚೂಣಿಯಲ್ಲಿರಬೇಕೆಂದರೆ, ದೇಶದ ವಿಜ್ಞಾನದ ತಳಹದಿ ಭದ್ರವಾಗಿರಬೇಕು.

ವಿಜ್ಞಾನ ಕ್ಷೇತ್ರದಲ್ಲಿ ನಮ್ಮ ಭಾರತಕ್ಕೆ ಗಣನೀಯವಾದ ಸಂಪನ್ಮೂಲ ಹಾಗೂ ಸಾಮರ್ಥ್ಯಗಳಿವೆ. ಆದರೆ ಅಗತ್ಯಕ್ಕೆ ತಕ್ಕಂತೆ ಅವುಗಳನ್ನು ಬಳಸುವಲ್ಲಿ ನಾವು ಇತರ ದೇಶಗಳಿಗಿಂತಲೂ ಬಹಳ ಹಿಂದಿದ್ದೇವೆ. ಈ ಕೆಳಕಂಡ ಒಂದೆರಡು ಉದಾಹರಣೆಗಳನ್ನು ಗಮನಿಸಿ. ರೇಡಿಯೋ ಅಲೆಗಳ ಮೂಲಕ ಕಾರ್ಯನಿರ್ವಹಿಸುವ ನಿಸ್ತಂತು ಸಂಪರ್ಕ ಸಾಧನವನ್ನು ಮೊದಲು(1895) ಪರೀಕ್ಷಿಸಿದ್ದು ನಮ್ಮ ವಿಜ್ಞಾನಿ ಜಗದೀಶಚಂದ್ರ ಬೋಸ್ ಅವರು. ಹಾಗೆಯೇ ರೇಡಿಯೋ ಅಲೆಗಳನ್ನು ಗುರುತಿಸಬಲ್ಲ ಅರೆವಾಹಕ ಹರಳನ್ನು (ಗ್ಯಾಲೆನಾ) ಮೊದಲ ಬಾರಿಗೆ ಬಳಸಿದ್ದು ಸಹಾ ಅವರೇ. ಆದರೆ ಜಾಗತಿಕ ರಾಜಕೀಯದಿಂದಾಗಿ 'ರೇಡಿಯೋ ಪಿತಾಮಹ'ರೆಂಬ ಬಿರುದು ಇಟಲಿಯ ಗುಗ್ಲಿಲ್ಮೊ ಮಾರ್ಕೊನಿ ಅವರ ಪಾಲಾಯಿತು. ನಮ್ಮ ಮೊಬೈಲ್ ಟೆಲಿಫೋನ್‌ಗಳ ಸಂಪರ್ಕಕ್ಕೆ ಇಂದಿಗೂ ಬಳಕೆಯಾಗುತ್ತಿರುವುದು ಬೋಸ್ ಅವರು ಅಂದು ಕೋಲ್ಕೊತ್ತಾದಲ್ಲಿ ಪ್ರದರ್ಶಿಸಿದ್ದ ಮಿಲಿಮೀಟರ್ ಅಳತೆಯ ರೇಡಿಯೊ ಸಂಕೇತಗಳೇ. ಉಪಗ್ರಹ ಸಂಪರ್ಕ ಹಾಗೂ ದೂರಸಂವೇದನೆಯೂ ಸೇರಿದಂತೆ ವಿಮಾನ ಹಾರಾಟಗಳನ್ನು ಗಮನಿಸುವ 'ರೇಡಾರ್' ಸಂಪರ್ಕ ಸಾಧನಗಳಿಗೂ ಬೆನ್ನೆಲುಬಾಗಿರುವುದು ಇದೇ 'ಮಿಲಿಮೀಟರ್ ವೇವ್ಸ್' ಇದರ ಸೃಷ್ಟಿ ನಮ್ಮಲ್ಲೇ ಆಗಿದ್ದರೂ, ಇದನ್ನು ಬಳಸಿಕೊಳ್ಳುವ ಸಾಧನಗಳೆಲ್ಲದರ ಅವಿಷ್ಕಾರಗಳು ಹೊರದೇಶಗಳಲ್ಲಾಯಿತು. ಉಪಗ್ರಹ ಆಧರಿತ ದೂರಸಂಪರ್ಕ ಹಾಗೂ ದೂರಸಂವೇದನೆ ಕ್ಷೇತ್ರದಲ್ಲಿ ಜಗತ್ತೇ ಮೆಚ್ಚುವ ಸಾಧನೆಗಳನ್ನು ನಾವು ಮಾಡಿದ್ದೇವೆ, ನಿಜ. ಆದರೆ ಆ ಸಾಧನೆಯ ಹಿನ್ನೆಲೆಯಲ್ಲಿರುವ ಬಹುತೇಕ ಉಪಕರಣಗಳನ್ನು ನಾವು ದುಬಾರಿ ಬೆಲೆಯಲ್ಲಿ ವಿದೇಶಗಳಿಂದ ಕೊಂಡುಕೊಂಡಿದ್ದೇವೆ.

ಸರ್ ಸಿ.ವಿ.ರಾಮನ್ ಎಂದ ಕೂಡಲೇ 'ರಾಮನ್ ಪರಿಣಾಮ' ಮತ್ತು ಆ ಆವಿಷ್ಕಾರಕ್ಕೆ ಅವರಿಗೆ ಸಂದ ನೊಬೆಲ್ ಪುರಸ್ಕಾರ(1930) ಕುರಿತಂತೆ ನಾವು ಥಟ್ಟೆಂದು ಉತ್ತರ ಹೇಳುತ್ತೇವೆ. ತಮ್ಮಲ್ಲಿದ್ದ ವಿವಿಧ ಹರಳುಗಳನ್ನು ಬಳಸಿಕೊಂಡು ಸೌರಬೆಳಕನ್ನು ಸಾಂದ್ರೀಕರಿಸುವ ಅನೇಕ ಪ್ರಯೋಗಗಳನ್ನು ರಾಮನ್ ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಬೆಳಕಿನ ಕಿರಣಗಳ ಕುರಿತು ಹೊಸ ಹೊಳಹುಗಳನ್ನು ನೀಡಿದ್ದರು. ಬೆಳಕಿನ ಕಿರಣಗಳು ಚೆದುರುವ ಸಂದರ್ಭದಲ್ಲಿ ವಿವಿಧ ವರ್ಣಗಳು ಗೋಚರವಾಗುತ್ತಿದ್ದುದು ಅವರ ಗಮನಕ್ಕೆ ಬಂದಿತ್ತು. ಈ ವರ್ಣಗಳು ಬೆಳಕಿನ ಕಿರಣಗಳನ್ನು ಆವೃತಗೊಂಡ ದ್ರವ್ಯಗಳಿಗೆ ಅನುಸಾರವಾಗಿ ಬದಲಾಗುವುದನ್ನು ಅವರು ಮೊದಲ ಬಾರಿ ಜಗತ್ತಿಗೆ ತೋರಿಸಿಕೊಟ್ಟರು. ಅನಿಲಗಳು, ಭಾಷ್ಪಗಳು, ದ್ರವಗಳು, ಹರಳುಗಳು ಹಾಗೂ ಅಸ್ಫಟಿಕ ಘನಗಳ ಮೇಲೆ ಈ ಪ್ರಯೋಗಗಳನ್ನು ಅವರು ನಡೆಸಿದ್ದರು. ಆ ಮೂಲಕ ವಸ್ತುವೊಂದು ಚೆದುರಿಸುವ ಬಣ್ಣಗಳ ತೋರಣದಿಂದಲೇ ಅದು ಯಾವ ಮೂಲವಸ್ತುವಿನ ಅಣುವೆಂದು ಗುರುತಿಸುವ 'ರಾಮನ್ ಸ್ಪೆಕ್ಟ್ರೋಸ್ಕಪಿ' ಪ್ರಯೋಗ ವಿಧಾನವನ್ನು ರಾಮನ್ ಅವರು ಆವಿಷ್ಕರಿಸಿದರು. ಈ ತಂತ್ರಜ್ಞಾನವನ್ನು ಆಧರಿಸಿದ ಸಹಸ್ರಾರು ಮಾಯಯಂತ್ರಗಳು ಇಂದು ಜಗತ್ತಿನಾದ್ಯಂತ ಬಳಕೆಯಲ್ಲಿವೆ. ಬಾಹ್ಯಾಕಾಶ ಪ್ರಯೋಗಗಳಿಗೆಂದು ಅಭಿವೃದ್ಧಿಯಾದ ಪ್ರಬಲ ಲೇಸರ್ ಸಲಾಕೆಗಳು, ತ್ವರಿತ ವೇಗದ ಡಿಜಿಟಲ್ ಚಿತ್ರ ಸಂಸ್ಕರಣೆಗಳಂಥ ಮುಂಚೂಣಿ ತಂತ್ರಜ್ಞಾನಗಳು 'ರಾಮನ್ ಸ್ಪೆಕ್ಟ್ರೋಸ್ಕಪಿ'ಯ ಜೊತೆಗೂಡಿ ಇಂದು 'ರಾಮನ್ ಟೆಕ್ನಾಲಜಿ'ಯೆಂಬ ಹೊಸ ಜ್ಞಾನಶಾಖೆಯೇ ಹುಟ್ಟಿದೆ. ಇದರ ಒಂದು ಉತ್ಪನ್ನ 'ರಾಮನ್ ಸ್ಕ್ಯಾನರ್' ಕಾಲು ಕಿಲೋಗ್ರಾಂ ತೂಗುವ ಈ ಕೈಪಿಡಿ ಸಾಧನದ ಮೂಲಕ ವಾತಾವರಣದಲ್ಲಿ ಬೆರಕೆಯಾಗಿರಬಹುದಾದ ವಿಷವಸ್ತು ಅಥವಾ ಸ್ಫೋಟಕವಸ್ತುವಿನ ಅಣುಗಳನ್ನು ನಾವು ಗುರುತಿಸಬಹುದು. ಔಷಧ ಮಿಶ್ರಣದ ಶತಕೋಟಿಯ ಒಂದು ಭಾಗದಲ್ಲಿನ ಕಲಬೆರಕೆಯನ್ನು ಸಹಾ ಕಂಡಿಹಿಡಿಯಬಹುದು. ಭವಿಷ್ಯದಲ್ಲಿ ಸ್ವಾಸ್ಥ್ಯ ಸೇವೆಯಿಂದ ಹಿಡಿದು, ಸಾರಿಗೆ ಸುರಕ್ಷೆ ಸೇರಿದಂತ ಅನೇಕ ಕ್ಷೇತ್ರಗಳಲ್ಲಿ ಇಂಥ ಸ್ಕ್ಯಾನರ್‌ಗಳು ವ್ಯಾಪಕವಾಗಿ ಬಳಕೆಯಾಗಲಿದೆ. 'ರಾಮನ್ ಸ್ಪೆಕ್ಟ್ರೋಸ್ಕಪಿ' ಆವಿಷ್ಕಾರವಾದದ್ದು ನಮ್ಮ ಭಾರತದಲ್ಲಿಯೇ, ಆದರೆ ಇಂದು 'ರಾಮನ್ ಟೆಕ್ನಾಲಜಿ'ಯ ಸಾಧನ-ಸಲಕರಣೆಗಳೆಲ್ಲವೂ ನಿರ್ಮಾಣವಾಗುತ್ತಿರುವುದು ಹೊರದೇಶಗಳಲ್ಲಿ.

1997ರಲ್ಲಿ ದಿಲ್ಲಿಯಿಂದ ನ್ಯೂಯಾರ್ಕ್‌ಗೆ ಪಯಣಿಸುತ್ತಿದ್ದಾಗ, ಲಂಡನ್‌ನಲ್ಲಿ ನನ್ನ ಪಕ್ಕ ಬಂದು ಕುಳಿತವರು ಜರ್ಮನಿಯಲ್ಲಿನ ದೂರಸಂಪರ್ಕ ಕಂಪನಿಯಲ್ಲಿ ಅತಿ ದೊಡ್ಡ ಹುದ್ದೆಯಲ್ಲಿದ್ದವರು. ನಾನು ಬೆಂಗಳೂರಿನವನೆಂದು ತಿಳಿದೊಡನೆಯೇ, "ಓಹ್ ನಿಮ್ಮ ಐಟಿಐ ಕಂಪನಿಯ ಆರ್‌ಆ್ಯಂಡ್‌ಡಿ ಒಂದು ಕಾಲದಲ್ಲಿ ಶ್ರೇಷ್ಠಮಟ್ಟದ್ದಾಗಿತ್ತು. ಅದು ನಿರ್ಮಿಸಿದ ರೂರಲ್ ಎಕ್ಸ್‌ಚೇಂಜ್(ರ್‍ಯಾಕ್ಸ್) ವ್ಯವಸ್ಥೆಯು ಮಾರುಕಟ್ಟೆಯಲ್ಲಿ ನಮಗೆ ದೊಡ್ಡ ಸ್ಪರ್ಧೆಯೊಡ್ಡಿತ್ತು. ಐಟಿಐ ಎಂದಿನಂತೆ ಮುಂದುವರೆದಿದ್ದರೆ, ನಾವು ಭಾರತದಲ್ಲಿ ಬ್ಯುಸಿನೆಸ್ ಮಾಡಲು ಆಗುತ್ತಿರಲಿಲ್ಲ" ಎಂದಿದ್ದರು. ಮುಂದಿನ ದಿನಗಳಲ್ಲಿ ಐಟಿಐ ಹೇಳಹೆಸರಿಲ್ಲದಂತಾಯಿತು. ಮದ್ರಾಸ್ ಐಐಟಿಯ ಮಾಜಿ ನಿರ್ದೇಶಕ ಪಿ.ವಿ.ಇಂದಿರೇಸನ್ ಅವರ ಹೆಸರನ್ನು ನೀವು ಕೇಳಿರಬಹುದು. ಅಬ್ದುಲ್ ಕಲಾಂ ಅವರಿಗೆ ಆಪ್ತರಾಗಿದ್ದ ಇಂದಿರೇಸನ್, ಸ್ವದೇಶಿ ಉದ್ದಿಮೆಗಳ ಪ್ರಬಲ ಪ್ರತಿಪಾದಕರಾಗಿದ್ದರು. ಇಂಗ್ಲೀಷ್ ವಾರಪತ್ರಿಕೆಯೊಂದಕ್ಕೆ(2003) ಬರೆದ ಲೇಖನವೊಂದರಲ್ಲಿ ಅವರು ಇಂಥದೇ ಒಂದು ಘಟನೆಯನ್ನು ನೆನಪಿಸಿಕೊಂಡಿದ್ದಾರೆ. "ಡಿಜಿಟಲ್ ಟೆಲಿಫೋನ್ ಎಕ್ಸ್‌ಚೇಂಜ್‌ಗಳ ಸ್ವದೇಶಿ ನಿರ್ಮಾಣಕ್ಕೆಂದು ಸ್ಥಾಪನೆಯಾದ ಕಂಪನಿ 'ಸೆಂಟರ್‌ಫಾರ್ ಡೆವಲಪ್‌ಮೆಂಟ್ ಆಫ್ ಟೆಲಿಮ್ಯಾಟಿಕ್ಸ್' (ಸಿ–ಡಾಟ್). ಅದು ಆಯೋಜಿಸಿದ್ದ ಔತಣಕೂಟವೊಂದರಲ್ಲಿ ಎಂಎನ್‌ಸಿಯೊಂದರ ಮುಖ್ಯಸ್ಥರು ನನಗೆ ಮಾತಿಗೆ ಸಿಕ್ಕರು. ನನ್ನ ಬಳಿ ತಮ್ಮ ದುಃಖವೊಂದನ್ನು ಹಂಚಿಕೊಂಡರು. ಪ್ರೊಫೆಸರ್, ಈ ಸಿ–ಡಾಟ್ ಇರುವ ತನಕ ನಾವು ಇಂಡಿಯಾದಲ್ಲಿ ಬ್ಯುಸಿನೆಸ್ ಮಾಡಲು ಹೇಗೆ ಸಾಧ್ಯ ಎಂದು ಅವರು ನನ್ನನ್ನು ಕೇಳಿದರು." ಆ ಕಾಲದಲ್ಲಿ ದೇಶದ ಮಾರುಕಟ್ಟೆಯ ತೊಂಭತ್ತು ಪ್ರತಿಶತ ಪಾಲು ಸಿ–ಡಾಟ್‌ನದಾಗಿತ್ತು. ನಂತರದ ದಿನಗಳಲ್ಲಿ ಎಂಎನ್‌ಸಿಗಳ ಆಮಿಷಗಳಿಗೆ ಬಲಿಯಾಗಿ ದೂರಸಂಪರ್ಕ ಸಚಿವಾಲಯದ ಭ್ರಷ್ಟ ಅಧಿಕಾರಿಗಳು ಸಿ–ಡಾಟ್ ಅನ್ನು ಮುಚ್ಚಿಸಿದರು. ಮಾರುಕಟ್ಟೆ ಸಂಪೂರ್ಣವಾಗಿ ತಿರುಗು–ಮುರುಗಾಯಿತು. ಈ ಕರೆ, ಬಿಎಸ್‌ಎನ್‌ಎಲ್‌ನ ಬೆನ್ನೆಲುಬು ಮುರಿಯುವಿಕೆಯ ಅಧ್ಯಾಯದೊಂದಿಗೆ ಈಗ ಮುಂದುವರಿದಿದೆ.

ದೇಶದ ಹೆಮ್ಮೆಯ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಅವರು ನನ್ನೊಂದಿಗೆ ಹಂಚಿಕೊಂಡ ಘಟನೆ ನೆನಪಾಗುತ್ತಿದೆ. ಯುಪಿಎ ಸರ್ಕಾರದ ಕಾಲ. ಅತ್ಯಗತ್ಯವಾಗಿದ್ದ ಆ್ಯಂಟೆನಾವೊಂದನ್ನು ಅಭಿವೃದ್ಧಿಪಡಿಸಲು ಇಸ್ರೋದ ಯೋಜನೆಯೊಂದು ಸರ್ಕಾರದ ಅನುಮೋದನೆಗೆ ಕಾದಿತ್ತು. ವಿಜ್ಞಾನ–ತಂತ್ರಜ್ಞಾನ ಸಚಿವಾಲಯವು ಆ್ಯಂಟೆನಾವನ್ನು ಸ್ವದೇಶಿಯಾಗಿ ಅಭಿವೃದ್ಧಿಪಡಿಸುವ ಬದಲು ಅಗ್ಗದ ದರದಲ್ಲಿ ಚೀನಾದಿಂದ ಖರೀದಿಸಬಹುದೆಂಬ ಚಿಂತನೆಯನ್ನು ಹರಿಬಿಟ್ಟಿತ್ತು. ವಿಜ್ಞಾನ–ತಂತ್ರಜ್ಞಾನದ ಅರಿವಿಲ್ಲದಿದ್ದರೂ ವಿತಂಡವಾದ ಮಾಡುವುದರಲ್ಲಿ ಪರಿಣತರಾಗಿದ್ದ ಸಚಿವಾಲಯದ ಬೃಹಸ್ಪತಿಗಳಿಗೆ ಸ್ವದೇಶಿ ತಂತ್ರಜ್ಞಾನದ ಮಹತ್ವವನ್ನು ಮನವರಿಕೆ ಮಾಡಿಕೊಡಲು ಯು.ಆರ್.ರಾವ್ ಅವರು ಸಾಕಷ್ಟು ಹೆಣಗಾಡಬೇಕಾಯಿತು. ಅಂದಿನ ಪ್ರಧಾನಮಂತ್ರಿಗಳು ಯು.ಆರ್.ರಾವ್ ಅವರ ಅಭಿಪ್ರಾಯಕ್ಕೇ ಮನ್ನಣೆಕೊಟ್ಟರು. ನಮ್ಮ ಮುಖ್ಯ ಸಂಪರ್ಕ ವ್ಯವಸ್ಥೆಯೊಂದು ಚೀನಾದ ಕುಣಿಕೆಯಿಂದ ಪಾರಾಯಿತು.

ನಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಸಾಕಷ್ಟು ಸಂಪನ್ಮೂಲಗಳಿವೆ. ಅವುಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡಲ್ಲಿ ಸ್ವಾವಲಂಬಿತನದ ನಮ್ಮ ಹಾದಿ ಸುಗಮ. ಉದಾಹರಣೆಗೆ, ನಮ್ಮ ಎಚ್‌ಎಎಲ್ ನಿರ್ಮಿತ ಹಗುರ ಯುದ್ಧವಿಮಾನ 'ತೇಜಸ್' ಒಂದು ಅತ್ಯದ್ಭುತ ಹಾರುಯಂತ್ರ, ಅದರ ಸಾಮರ್ಥ್ಯಗಳನ್ನು ಅಳೆಯುವ ಮೊದಲೇ ಕೊರತೆಗಳ ಪಟ್ಟಿಯೊಂದಿಗೆ ಅದನ್ನು ಹೀಗೆಳೆಯುವವರ ಸಂಖ್ಯೆ ಸಾಕಷ್ಟಿದೆ. ದುಬಾರಿ ಬೆಲೆ ತೆತ್ತು ವಿದೇಶಿ ವಿಮಾನಗಳನ್ನು ಖರೀದಿಸಬೇಕು. ನಮ್ಮದೇ ಬಳಕೆಯ ಮೂಲಕ ಉತ್ತೇಜನ ನೀಡಿದರೆ ನೂರಾರುಗಟ್ಟಲೆ ಸಂಖ್ಯೆಯಲ್ಲಿ ವಾಯುಪಡೆ ಖರೀದಿಸಬೇಕು. ನಮ್ಮದೇ ಬಳಕೆಯ ಮೂಲಕ ಉತ್ತೇಜನ ನೀಡಿದರೆ ನೂರಾರುಗಟ್ಟಲೆ 'ತೇಜಸ್' ವಿಮಾನಗಳನ್ನು ಹೊರದೇಶಗಳಿಗೆ ಮಾರುವುದು ಸಹ ಸುಲಭವಾಗುತ್ತದೆ.

ಭಾರತವನ್ನು ಸದೃಢವಾಗಿಸಬೇಕೆಂದರೆ ನಾವು ಅಬ್ದುಲ್ ಕಲಾಂ ಅವರ ಚಿಂತನೆಗಳತ್ತ ಗಮನ ಹರಿಸಬೇಕು. ಅವರು ಬರೆದ 'ವಿಷನ್–2020' ಎಂಬ ಮುಂಗಾಣ್ಕೆ ಗ್ರಂಥದಲ್ಲಿ ನಮ್ಮ ದೇಶವನ್ನು ಸ್ವಾವಲಂಬಿಯಾಗಿಸುವುದು ಹೇಗೆಂದು ವಿವರಿಸಿದ್ದಾರೆ. ಅವರ ಆದ್ಯತೆಯ ಪಟ್ಟಿಯಲ್ಲಿ ದೇಶೀಯ ಸಂಶೋಧನೆಗಳ ಉತ್ತೇಜನವೇ ಮೊದಲ ಸ್ಥಾನ ಪಡೆದಿದೆ. ವೈಜ್ಞಾನಿಕ ವ್ಯವಸಾಯ ಪದ್ಧತಿ, ಔಷಧಗಳಿಗೆ ಬೇಕಾದ ರಾಸಾಯನಿಕಗಳ ಉತ್ಪತ್ತಿ,.ಸೌಲಭ್ಯವಿರುವ ಲೋಹದದಿರುಗಳ ಸಮರ್ಥ ಬಳಕೆ, ರಾಕೆಟ್–ಉಪಗ್ರಹ ತಂತ್ರಜ್ಞಾನ ಅಭಿವೃದ್ಧಿಗಳಂಥ ಕ್ಷೇತ್ರಗಳಲ್ಲಿ ನಾವು ಜಾಗತಿಕ ಔನ್ನತ್ಯ ಸಾಧಿಸಬೇಕೆಂದಿದ್ದಾರೆ.

ಇಂಥ ಅನೇಕ ನಿದರ್ಶನಗಳು ಕಣ್ಣಿಗೆ ಬೀಳಬಹುದು. ಅವುಗಳಿಂದ ನಾವು ಕಲಿಯಬೇಕಾಗಿರುವ ನೀತಿ ಪಾಠ–ದೇಶಿಯ ಸಂಶೋಧನಾ ಸಂಸ್ಥೆಗಳಲ್ಲಿ ವಿಜ್ಞಾನವನ್ನು ಬೆಳೆಸಬೇಕು ಹಾಗೂ ಅನ್ವಯಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬೇಕು. ನಮ್ಮದೇ ಕಂಪನಿಗಳಲ್ಲಿ ಸ್ವದೇಶಿ ಸಾಧನ–ಸಲಕರಣೆಗಳನ್ನು ಉತ್ಪಾದಿಸಬೇಕು. ಸ್ವಾವಲಂಬಿಯಾಗಬೇಕು. ಆದರೆ ಇದು ಅಷ್ಟು ಸುಲಭದ್ದಲ್ಲ. ನಮ್ಮೆಲ್ಲ ಪ್ರಯತ್ನಗಳನ್ನು ಹೊಸಕಲು ವಿದೇಶಿ ಕಂಪನಿಗಳು ವ್ಯವಸ್ಥಿತ ತಂತ್ರಗಳನ್ನು ರೂಪಿಸುತ್ತಿರುತ್ತವೆ. ತಮ್ಮ ಲೇಖನದ ಕೊನೆಯಲ್ಲಿ ಇಂದಿರೇಸನ್ ಅವರು ಗಾಂಧೀಜಿಯವರ ವಿವೇಚನೆಯೊಂದನ್ನು ನೆನಪಿಸುತ್ತಾರೆ. "ತಾಜಾ ತಂಗಾಳಿ ಒಳಬರಬೇಕೆಂದರೆ ನಮ್ಮ ಬಾಗಿಲನ್ನು ತೆರೆದಿರಬೇಕು, ಆದರೆ ಆ ಗಾಳಿಯು ನಮ್ಮನ್ನೇ ನೂಕಿ ಬೀಳಿಸುವಷ್ಟು ಬಿರುಸಾದಾಗ ಬಾಗಿಲನ್ನು ಮುಚ್ಚಬೇಕು"

ಲೇಖಕರು:– ಸುಧೀಂದ್ರ ಹಾಲ್ದೊಡ್ಡೇರಿ, ಹಿರಿಯ ವಿಜ್ಞಾನಿ

ಆಧಾರ:ವಿಜಯಕರ್ನಾಟಕ, ದಿನಾಂಕ:20.05.2020